**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ. 3363/2023</u>**

**ದಿನಾಂಕಃ 23-07-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿಯ ಹೆಸರು | ಃ | ಶ್ರೀಮತಿ ರಮ್ಯ | ಚಾಸಾ-1, ಪ್ರಾಸಾ-1 |
| ಗಂಡನ ಹೆಸರು | ಃ | ರಾಘವೇಂದ್ರ | |
| ವಯಸ್ಸು | ಃ | 35 ವರ್ಷ | |
| ಉದ್ಯೋಗ | ಃ | ಉಪ ನಿರೀಕ್ಷಕರು | |
| ವಾಸ | ಃ | ಬೀರೂರು | |

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ನಾನು ದಿಃ 17.03.2021 ರಿಂದ 20.06.2023 ರವರೆಗೆ ಕಡೂರು ಠಾಣೆಯಲ್ಲಿ ಆರಕ್ಷಕ ಉಪ ನೀರಿಕ್ಷಕಳಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 18.03.2023 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿದ್ದಾಗ ಬಾತ್ಮಿದಾರರು ಕರೆ ಮಾಡಿ ಗೆದ್ಲೆಹಳ್ಳಿ ಗ್ರಾಮದಲ್ಲಿ ಆರೋಪಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು ನಾನು ಠಾಣಾ ಸಿಬ್ಬಂದಿ ಚಾಸಾ-4 ರಿಂದ 8 ರವರನ್ನು ಕರೆದುಕೊಂಡು ಇಲಾಖಾ ವಾಹನದಲ್ಲಿ ಗೆದ್ಲೆಹಳ್ಳಿಗೆ ಹೋಗುತ್ತಿರುವಾಗ, ಚಾಸಾ-2 ಮತ್ತು 3 ರವರಿಗೆ ಮಾಹಿತಿ ತಿಳಿಸಿ ದಾಳಿಗೆ ಸಹಕರಿಸುವಂತೆ ನೋಟೀಸ್ ನೀಡಿರುತ್ತೇನೆ. ಸಾಕ್ಷಿಯ ಸದರಿ ನೋಟೀಸ್ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ರಾತ್ರಿ 8.50 ಗಂಟೆ ಸಮಯದಲ್ಲಿ ಗೆದ್ಲೆಹಳ್ಳಿ ಬಳಿ ಆರೋಪಿ ಒಂದು ಚೀಲದಲ್ಲಿ ರಾಜಾ ವಿಸ್ಕಿ 90 ಎಂ.ಎಲ್ ನ 13 ಪೌಚುಗಳು, ಓಲ್ಡ ಅಡ್ಮಿರಲ್ 180 ಎಂಎಲ್ ನ 9 ಪೌಚು, ಓ ಟಿ 180 ಎಂಎಲ್ ನ 24 ಪೌಚು, ಡಿಕೆ ಡಬಲ್ ಕಿಕ್ 90 ಎಂಎಲ್ ನ 11 ಪೌಚು, ಬ್ಯಾಕ್ ಪೈಪರ್ 180 ಎಂಎಲ್ ನ 10 ಪೌಚುಗಳು ಇರುವುದು ಕಂಡುಬಂದಿರುತ್ತದೆ.

ಮಹಜರ್ ಮಾಡುವ ಮುನ್ನಾ ಚಾಸಾ-8 ರವರ ಮುಖಾಂತರ ವರದಿಯನ್ನು ತಯಾರಿಸಿ ಚಾಸಾ-10 ರವರಿಗೆ ಸಲ್ಲಿಸಲಾಯಿತು. ಚಾಸಾ-10 ರವರು ಪ್ರಥಮ ವರ್ತಮಾನ ವರದಿ ತಯಾರಿಸಿದ ನಂತರ ನಮಗೆ ಫೋನ್ ಮುಖಾಂತರ ತಿಳಿಸಿದ್ದು ತನಿಖೆ ಮುಂದುವರೆಸಿ ಮಹಜರು ತಯಾರಿಸಿರುತ್ತೇನೆ. ಸದರಿ ಮಹಜರನ್ನು ನಿಪಿ.2 ಎಂದು, ಸಾಕ್ಷಿ

ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ನಿಪಿ-2 ರಂತೆ ಮಹಜರನ್ನು ರಾತ್ರಿ 10.00 ರಿಂದ 10.45 ರವರೆಗೆ ತಯಾರಿಸಿ ಸಾಕ್ಷಿಗಳಿಗ ಓದಿ ಹೇಳಿ ಅವರ ಸಹಿ ಪಡೆದಿರುತ್ತೇವೆ. ಅದೇ ಸಮಯದಲ್ಲಿ ತೆಗೆದ ಛಾಯಾಚಿತ್ರವನ್ನು ಈಗಾಗಲೇ ನಿಪಿ-3 ಎಂದು ಗುರತಿಸಲಾಗಿರುತ್ತದೆ.

ನಂತರ ಠಾಣೆಗೆ ಹಾಜರಾಗಿ ಚಾಸಾ-10 ರವರಿಗೆ ಮಹಜರ್ ಮತ್ತು ಆರೋಪಿ ಹಾಗೂ ಮದ್ಯವನ್ನು ಹಸ್ತಾಂತರಿಸಿರುತ್ತೇನೆ. ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು, ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮದ್ಯವನ್ನು ಮತ್ತು ಚೀಲವನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುದ್ದೆ ಮಾಲು 1 ಮತ್ತು 2 ಎಂದು ಗುರುತಿಸಲಾಯಿತು. ಆರೋಪಿಯನ್ನು ಗುರುತಿಸಲು ತಮ್ಮ ತಕರಾರು ಇರುವುದಿಲ್ಲ ಎಂದು ವಕೀಲರು ಹೇಳಿರುತ್ತಾರೆ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ. ಎಸ್ ಎನ್ ಎ ವಕೀಲರಿಂದಃ</u>**

ಪಂಚನಾಮೆಯಾದ ನಂತರ ಪ್ರಥಮ ವರ್ತಮಾನ ವರದಿ ತಯಾರಾಗಿರುತ್ತದೆ ಎಂದರೆ ಸರಿಯಲ್ಲ. ಎಫ್ ಐ ಆರ್ ಆದ ನಂತರ ನಾವು ಮಹಜರ್ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮದ್ಯದ ಪೌಚುಗಳನ್ನು ಆರೋಪಿಯ ಸಮಕ್ಷಮ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ದಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಮದ್ಯವನ್ನು ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ ಆರೋಪಿಗೂ ಮತ್ತು ಮು.ಮಾಲು *1* ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ಮದ್ಯವನ್ನು ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಠಾಣೆಯ ಅಂಕಿ ಅಂಶಕ್ಕಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ : ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.